ನೋಡದೇ ಕಾರ್ಯಕ್ಕೆ ಇಳಿದರು. ನನಗೆ ಇವರ ಬಗ್ಗೆ ವಿಪರೀತ ಹೆಮ್ಮೆ ಅನ್ನಿಸಿತು. ಹದಿನಾಲ್ಕು ದಿನದ ಕಾರ್ಯಗಳೆಲ್ಲ ನಡೆದು ನಾನು ಅತ್ತಿಗೆ ಇಬ್ಬರೂ ಹೊರಡುವ ದಿನ ಹತ್ತಿರ ಬಂತು. ಇಬ್ಬರೂ ಹೊರಡುವ ಹಿಂದಿನ ದಿನ ಶೇಷಜ್ಜಿಯ ಕೋಣೆಯಲ್ಲೇ ಮಾತನಾಡುತ್ತ ಕುಳಿತಿದ್ದೆವು. ಅವಳ ಹತ್ತಿರ ಇದ್ದಿದ್ದು ಮೂರು ಸೀರೆ ಮಾತ್ರ. ಅತ್ತಿಗೆ ಎರಡು ತೆಗೆದುಕೊಂಡಳು. ನಾನು ಒಂದನ್ನು ತೆಗೆದುಕೊಂಡೆ. ನಂತರ ಅತ್ತಿಗೆ ಆ ಬಂಗಾರದ ಚೈನು ಮತ್ತು ರುದ್ರಾಕ್ಷಿ ಇದ್ದ ಡಬ್ಬಿ ತೆಗೆದಳು. ಅದನ್ನು ನೋಡಿ ನನಗೆ ಅಳು ಉಕ್ಕಿತು. ಅತ್ತಿಗೆ ಅದನ್ನು 'ನೀನು ತೊಗೋ' ಎಂದು ಕೊಟ್ಟಳು. 'ನನಗಾ!' ಆಶ್ಚರ್ಯಗೊಂಡೆ. ಅತ್ತಿಗೆ ಹೇಳಿದಳು, 'ಅತ್ತೆ ಯಾವಾಗಲೋ ಹೇಳಿದ್ದಳು, ನಾನೇನಾದ್ರೂ ಹೇಳ್ದೇ ಕೇಳ್ದೇ ಹೊರಟು ಹೋದ್ರೆ ಇದೆರಡನ್ನೂ ಆ ಕೂಸಿಗೆ ಕೊಡು, ತುಂಬಾ ಯೋಚನೆ ಮಾಡುತ್ತೆ. ಹೊಟ್ಟೇಲಿ ಹುಟ್ಟಲಿಲ್ಲ, ಬೆಳೆಯಲಿಲ್ಲ. ಆದರೆ ನೋಡು... ಈ ಜನ್ಮದ ಕರುಳಲ್ಲ ಕಣೆ ಅದು. ಯಾವ ಜನ್ಮದ್ದೋ... ನಾನು ಈ ಅರಳಿ ಎಲೆಗೆ ಅಂಟಿಕೊಂಡಿದ್ದೇ ಅವಳಿಗೋಸ್ಕರ. ಅದನ್ನ ಅವಳಿಗೆ ಆಗ ಹೇಳು' ಅಂತ. ನನ್ನ ಕಣ್ಣಲ್ಲಿ ನೀರು ಧಾರೆ ಧಾರೆಯಾಗಿ ಚಿಮ್ಮಿ ಹರಿಯತೊಡಗಿತು.

ದೆಹಲಿಗೆ ಹಿಂತಿರುಗಿದ ನಂತರ ಸಂಜೆ ಸ್ನಾನ ಮಾಡಿ ದೇವರ ದೀಪ ಹಚ್ಚಿ ಅಜ್ಜಿಯ ಡಬ್ಬಿ ತೆಗೆದೆ. ಅಲ್ಲೇ ಇದ್ದ ಇವರು, 'ಅದನ್ನ ದೇವರ ಮಂಟಪದಲ್ಲಿ ಇಟ್ಟುಬಿಡು. ಅದರ ಸ್ಥಾನ ಅದೇ' ಅಂದರು. ನಾನು ಡಬ್ಬಿಯನ್ನು ಮಂಟಪದಲ್ಲಿ ಇಟ್ಟು ಕೈಮುಗಿದು ಅಲ್ಲೇ ಕುಳಿತು, 'ಅಜ್ಜೀ ನೀವು ನನ್ನ ಜೊತೆ, ನನ್ನ ಕುಟುಂಬದ ಜೊತೆ ಯಾವಾಗಲೂ ಇರುತ್ತೀರ. ಪ್ರತಿನಿತ್ಯ ನಾನು ನಿಮ್ಮ ಜೊತೆ ಇದೇ ರೀತಿ ಅನುಸಂಧಾನ ಮಾಡ್ತಿರ್ತೀನಿ' ಅಂದೆ ಮನದಲ್ಲಿ. 'ಗೊತ್ತು ಪುಟ್ಟೀ ... ಅದಕ್ಕೆ ನಾನು ಬಂದಿದ್ದು' ಅಜ್ಜಿ ನಕ್ಕಂತೆ ಆಯಿತು.

ಅರ್ಪಿ ಅಪ್ಪನನ್ನು ಗೋಗರೆಯುತ್ತಿದ್ದಳು 'ನಾಳೆ ನೀನು ಬಂದು ನನ್ನ ಡ್ಯಾನ್ಸ್ ಗೆ ಸೇರಿಸಿಕೊಳ್ಳಲು ಟೀಚರ್ ಜೊತೆ ಮಾತಾಡು' ಅಂತ.

'ಆಯ್ತು ಪುಟ್ಟಿ... ನಾನೇ ಬಂದು ಮಾತಾಡ್ತೀನಿ... ಈಗ ಮಲಗು' ಅಂತ ಅವಳನ್ನು ಅಪ್ಪ ಮಲಗಿಸುತ್ತಿದ್ದರು.

## ಎಂ.ಆರ್. ಮಂದಾರವಲ್ಲಿ

ಮೈಸೂರಿನಲ್ಲಿ ನೆಲೆಸಿರುವ ಮಂದಾರವಲ್ಲಿ ಶಿಕ್ಷಣಕ್ಷೇತ್ರದಲ್ಲಿ ಸಂಶೋಧಕಿ. ಮನುಷ್ಯ ಸಂಬಂಧಗಳ ನಡುವಿನ, ಕುಟುಂಬದೊಳಗಿನ ಸೂಕ್ಷ್ಮ ನೇಯ್ಗೆಯನ್ನು ಅವರ ಕತೆಗಳು ದಾಖಲಿಸುತ್ತವೆ. 'ಗೊಂದಲಗಳ ನಾಡಿನಲ್ಲಿ', 'ಪರಿಸರ ಎಂದರೇನು?', 'ಯಾನ ಪ್ರತಿಯಾನ' ಇವು ಅವರ ವೈಚಾರಿಕ, ಸಾಂಸ್ಕೃತಿಕ ಬರಹಗಳ ಪುಸ್ತಕಗಳು. 'ಅಳುವುದಿಲ್ಲವೇ ವಸು' ಅವರ ಕತೆಗಳ ಸಂಗ್ರಹ. 'ಅಂಧಮಕ್ಕಳ ಅರಿವಿನಂಗಣ' ಅವರ ಸಂಶೋಧನಾತ್ಮಕ ಕೃತಿ.